# ಚಿತ್ರಕಲಾ ಅರಮನೆ

ಕೌಶಲ ಬೆಳವಣಿಗೆಗಾಗಿ

## ಕಲೆಯನ್ನು ಮೈಗೂಡಿ ಕೊಂಡಾಗ ಕಲಿಕೆಗೆ ಸ್ಫೂರ್ತಿ ಸಿಗುತ್ತದೆ : ಆರ್ಟಿಸ್ಟ್ ಸಿದ್ದು

ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಯಲ್ಲೂ ಮಕ್ಕಳು ಹೆಚ್ಚು ಆಸಕ್ತಿವಹಿಸಲೆಂದು ಈ ಸಂಸ್ಥೆಯು ಮಕ್ಕಳಿಗೆ ಚಿತ್ರಕಲಾ ತರಬೇತಿಯನ್ನು ಸಹ ನೀಡುತ್ತಿದೆ. ಮಕ್ಕಳಲ್ಲಿರುವ ಕೌಶಲಗಳನ್ನು ಪತ್ತೆಹಚ್ಚಿ ಉತ್ತೇಜನ ನೀಡುವುದಕ್ಕಾಗಿ ಪ್ರತ್ಯೇಕ ಶಿಕ್ಷಕರನ್ನು ಒದಗಿಸಿ ಶಾಲಾ ಹಂತದಲ್ಲೇ ಚಿತ್ರಕಲಾ ತರಬೇತಿಯನ್ನು ನೀಡಲಾಗುತ್ತಿದೆ ಎಂದು ಚಿತ್ರ ಬರಹಗಾರ ಸಿದ್ದುರವರು ತಿಳಿಸಿದರು.

ಪ್ರತಿ ಶಾಲೆಗೆ ವಾರಕ್ಕೊಮ್ಮೆ ಭೇಟಿ ನೀಡಿ 2 ಗಂಟೆ ಅವಧಿ ಬೋಧನೆ ಮಾಡಲಾವುದು. ಪಠ್ಯಕ್ಕೆ ಪೂರಕವಾದ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಅದರ ಚಿತ್ರಗಳನ್ನು ಬಿಡಿಸಲಾಗುತ್ತದೆ. ವ್ಯಕ್ತಿ, ಪ್ರಾಣಿ, ಸನ್ನಿವೇಶ ಹೀಗೆ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ತರಬೇತಿ ನೀಡಿ ಮೌಲ್ಯಮಾಪನಕ್ಕೊಳಪಡಿಸಿ ಅಂಕಗಳನ್ನು ನೀಡಲಾಗುತ್ತದೆ.

ಕಣ್ಣೂರು, ಮಂಗಲ, ಲೊಕ್ಕನಹಳ್ಳಿ, ಬಂಡಳ್ಳಿ ರಾಮಾಪುರ ಮತ್ತು ಕೆಂಪಯ್ಯನಹಟ್ಟಿ ಶಾಲೆಗಳಲ್ಲಿ ಚಿತ್ರಕಲಾ ತರಗತಿಗಳನ್ನು ನಡೆಸಲಾಗುತ್ತಿದೆ. ಎಲ್ಲಾ 6 ಶಾಲೆಗಳಲ್ಲಿ ಇಚ್ಛೆಯುಳ್ಳ ಆಯ್ದ 5ನೇ ತರಗತಿ ರಿಂದ 8ನೇ ತರಗತಿಯ 20 ಮಕ್ಕಳಿಗೆ ಮಾತ್ರ ತರಬೇತಿ ನೀಡಲಾಗುತ್ತಿದೆ. ಮೂಲಭೂತ ಕಲಿಕೆಗೆ ಹೆಚ್ಚು ಒತ್ತುನೀಡಿ ಚಿತ್ರ ಬಿಡಿಸುವ ಕೌಶಲವನ್ನು ಕಲಿಸುವುದು ಕಾರ್ಯಕ್ರಮದ ಉದ್ದೇಶವಾಗಿದೆ.





ಈ ಮಕ್ಕಳಿಗೆ ಪೆನ್ಸಿಲ್‌ನಿಂದ ಸ್ಕೆಚ್ಚಿಂಗ್ ಹಾಗೂ ಶೇಡಿಂಗ್, ಚಾರ್ಕೋಲ್ ಪೇಯಿಂಟ್, ಲ್ಯಾಡ್ಕೇಪ್ ಪೇಯಿಂಟ್, ಸ್ಟಿಲ್ ಲೈಪ್ ಪೇಯಿಂಟ್, ಮೂವಿಂಗ್ ಚಿತ್ರ, ಪ್ರೋಟ್ರಾಟ್ ಪೇಯಿಂಟ್‌ಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಬಿಡಿಸುವುದು. ಪ್ರತಿ ಮೂರು ವಾರಕ್ಕೊಮ್ಮೆ ಒಂದು ವಿಧದ ಈ ರೀತಿಯ ಚಿತ್ರಗಳನ್ನು ಬಿಡಿಸಿ ತರಬೇತಿ ನೀಡಲಾಗುತ್ತಿದೆ. ಅಗತ್ಯ ಸಂದರ್ಭದಲ್ಲಿ ವಿಭಿನ್ನ ಕೌಶಲಗಳನ್ನು ವೃದ್ಧಿಸಲು ಸಹಾಯ ಮಾಡುತ್ತಿದ್ದಾರೆ. ಈ ಮೂಲಕ ಈ ಕೌಶಲವನ್ನು ತಮ್ಮ ಪಠ್ಯದಲ್ಲೂ ಅಳವಡಿಕೆ ಮಾಡಿಕೊಳ್ಳುತ್ತಾರೆ ಎಂದು ಸಿದ್ದು ತಿಳಿಸಿದರು.

ಮಕ್ಕಳಲ್ಲಿರುವ ಸುಪ್ತ ಪ್ರತಿಭೆಯನ್ನು ಹೊರಹೊಮ್ಮಿಸಲು ಇದು ಸುವರ್ಣಾವಕಾಶವಾಗಿದೆ. ಪ್ರತಿ ಮಗುವಿನಲ್ಲೂ ತನ್ನದೇ ಆದ ಕೌಶಲ ವೃದ್ಧಿಸುವ ಸಾಮರ್ಥ್ಯ ವಿರುತ್ತದೆ. ಅದನ್ನು ಪ್ರೇರೇಪಿಸಿದಾಗ ಮತ್ತಷ್ಟು ಬೆಳವಣಿಗೆಯಾಗಿ ಉತ್ತಮ ಕಲಾವಿದರಾಗುವುದು ಸಂಶಯವಿಲ್ಲ. ಸಂಪೂರ್ಣವಾಗಿ ಚಿತ್ರ ಬಿಡಿಸುವ ಸಾಮರ್ಥ್ಯ ಗಳಿಸಿದ ವಿದ್ಯಾರ್ಥಿಗಳು ಮುಂದಿನ ದಿನಗಳಲ್ಲಿ ವಿದ್ಯಾಭ್ಯಾಸದ ಜೊತೆಗೆ ಈ ವೃತ್ತಿ ಮಾಡಿಕೊಂಡು ಜೀವನ ನಿರ್ವಹಿಸಿಕೊಂಡು ಸ್ವತಂತ್ರವಾಗಿ ಬದುಕಬಹುದು.

### ಗ್ರಂಥಾಲಯಕ್ಕೆ ಭೇಟಿ



ಅಮೇರಿಕಾದಿಂದ ಆಗಮಿಸಿದ್ದ ಮೈಸೂರು ಮೂಲದ ಮಲ್ಲಿಕ್ ಪ್ರಸಾದ್ ಮತ್ತು ದಂಪತಿ ಅರಿವಿನ ಅರಮನೆ ಗ್ರಂಥಾಲಯವನ್ನು ವೀಕ್ಷಿಸಿದರು.

ಹನೂರು ಶೈಕ್ಷಣಿಕ ವಲಯದ ಮಂಗಲ ಶಾಲೆಗೆ ಮಲ್ಲಿಕ್ ಪ್ರಸಾದ್ ಆಗಮಿಸಿ ಗ್ರಂಥಾಲಯದ ಕಾರ್ಯ ಚಟುವಟಿಕೆಯನ್ನು ಪರಿಶೀಲನೆ ನಡೆಸಿದರು. ವಿಜ್ಞಾನ ಸಂಘದ ಚಟುವಟಿಕೆಗಳು, ಚಿತ್ರಕಲಾ ವಿದ್ಯಾರ್ಥಿಗಳು ಬರೆದಿರುವ ಚಿತ್ರಗಳನ್ನು ವೀಕ್ಷಣೆ ಮಾಡಿದರು. ಹಾಗೆಯೆ ಇನ್ನೂ ಉತ್ತಮಪಡಿಸಿಕೊಳ್ಳಲು ಸಲಹೆ ನೀಡಿದರು. ಮಕ್ಕಳ ಚಿತ್ರಕಲೆಯನ್ನು ಸುಂದರವಾಗಿ ಚಿತ್ರಿಸಿದ್ದಾರೆ. ಇದು ಹೆಮ್ಮೆಯ ಸಂಗತಿಯಾಗಿದೆ ಎಂದರು.

ಸಂಸ್ಥೆಯು ವಿನೂತನ ಕಾಯಕ್ರಮಗಳನ್ನು ಸರ್ಕಾರಿ ಶಾಲೆಗಳಲ್ಲಿ ಅನುಷ್ಠಾನಗೊಳಿಸಿ ಮಕ್ಕಳಲ್ಲಿ ಅಧ್ಯಯನ ಶೀಲಗುಣವನ್ನು ಬೆಳೆಸುತ್ತಿದೆ. ವಿಜ್ಞಾನ ಸಂಘ, ಚಿತ್ರಕಲಾ ತರಬೇತಿ ನೀಡುತ್ತಿರುವುದರ ಜೊತೆಗೆ ವಿಶಿಷ್ಟ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಇದು ಮಕ್ಕಳಿಗೆ ಶೈಕ್ಷಣಿಕವಾಗಿ ತುಂಬಾ ಉಪಯೋಗಾರ್ಹವಾಗಿದೆ.

**ಯೋಜನಾ ಸಂಯೋಜಕ: ಡಿ.ಹರೀಶ್**

## ವಿಜ್ಞಾನ ವಸ್ತು ಪ್ರದರ್ಶನವು ಮಕ್ಕಳ ಪ್ರತಿಭೆಯನ್ನು ಹೊರಹಾಕುತ್ತದೆ: ವೈ.ಕೆ. ತಿಮ್ಮೇಗೌಡ ಲಿಯೋನಾರ್ಡೋ ಡ ವಿಂಚಿ ಕಾರ್ಯಕ್ರಮ



ಕಣ್ಣೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲಲಿ ಲಿಯೋ ನಾರ್ಡೋ ಡ ವಿಂಚಿ ಹೆಸರಿನಲ್ಲಿ ವಿಜ್ಞಾನ ವಸ್ತು ಮತ್ತು ಚಿತ್ರಕಲಾ ಸ್ಪರ್ಧೆಯನ್ನು ಹನೂರು ಶೈಕ್ಷಣಿಕ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ವೈ.ಕೆ. ತಿಮ್ಮೇಗೌಡರವರು ವಿಜ್ಞಾನ ವಸ್ತು ಪ್ರದರ್ಶನಕ್ಕೆ ಚಾಲನೆ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇಂದಿನ ಆಧುನಿಕ ಯುಗದಲ್ಲಿ ವಿಜ್ಞಾನ ಬೆಳವಣಿಗೆ ಸರವೇಗದಲ್ಲಿ ಆಗುತ್ತಿದೆ. ಅದಕ್ಕೆ ತಕ್ಕಂತ ವಿದ್ಯಾರ್ಥಿಗಳು ವಿಜ್ಞಾನದಲ್ಲಿ ಹೆಚ್ಚು ಜ್ಞಾನಾರ್ಜನೆ ಪಡೆದುಕೊಳ್ಳಬೇಕೆಂದು ಕಿವಿಮಾತು ಹೇಳಿದರು. ಮಕ್ಕಳಲ್ಲಿ ಓದುವ ಆಸಕ್ತಿ ಹೆಚ್ಚಿಸುವುದರ ಜೊತೆಗೆ ಆಶ್ರಯ ಸಂಸ್ಥೆಯು ಇಂತಹ ವಿನೂತನ ಕಾರ್ಯಕ್ರಮಗಳನ್ನು ಆಯೋಜಿಸಿರುವುದು ಶ್ಲಾಘನೀಯ ವಿಷಯವಾಗಿದೆ ಎಂದರು.

### ನಿತ್ಯ ಜೀವನದ ಅನುಭವಗಳೇ ವಿಜ್ಞಾನ: ಗೀತಾ ಅರವಿಂದ್



ರಾಮಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಅರಿವಿನ ಅರಮನೆ ಗ್ರಂಥಾಲಯಕ್ಕೆ ಅನುಭವ ಸೈನ್ಸ್ ಕ್ಲಬ್‌ನ ಸಂಸ್ಥಾಪಕಿ ಗೀತಾ ಅರವಿಂದ್‌ರವರು ಭೇಟಿ ವಿಜ್ಞಾನ ಚಟುವಟಿಕೆ ಮಾಡಿದರು.

ವಿಜ್ಞಾನ ಸಂಘದ ಕಾರ್ಯ ಚಟುವಟಿಕಗಳ ಪರಾಮರ್ಶನ ಮಾಡಲು ಜೂನ್ ತಿಂಗಳಲ್ಲಿ ಈ ಶಾಲೆಗೆ ಆಗಮಿಸಿ ಮಕ್ಕಳ ಜೊತೆ ವಿಜ್ಞಾನ ಕ್ಲಿಷ್ಟಕರ ಕಲಿಕಾಂಶಗಳ ಕುರಿತು ಚರ್ಚಿಸಿದರು. ಮಕ್ಕಳ ಕೌತುಕ ಪ್ರಶ್ನೆಗಳಿಗೆ ಉತ್ತರಿಸಿದರು. ವಿಜ್ಞಾನದ ಕುತೂಹಲಕಾರಿ ಅಂಶಗಳನ್ನು ತಿಳಿಸಿ ಮಕ್ಕಳು ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಬೇಕೆಂದು ಮಕ್ಕಳಿಗೆ ಪ್ರೇರಣೆ ನೀಡಿದರು. ನಂತರ ಮಕ್ಕಳ ಮೌಲ್ಯಮಾಪನ ನಡೆಸಿ ಸೈನ್ಸ್ ರೆಕಾರ್ಡ್ ಪುಸ್ತಕಗಳನ್ನು ವೀಕ್ಷಿಸಿದರು.